



ನಕ್ಕುಬಿಡಿ

★★★

### ಮಹಾಲಕ್ಷ್ಮಿ

ಮಗ: ಅಮ್ಮಾ.. ನಮ್ಮ ಮನೆಯ ಪೂಜಾ ಕೊಠಡಿಯಲ್ಲಿರುವ ಮಹಾಲಕ್ಷ್ಮಿ ಫೋಟೋವನ್ನು ತೆಗೆದುಬಿಟ್ಟು ನಮ್ಮನೆ ಕೆಲಸಗಾರ್ತಿಯ ಭಾವಚಿತ್ರವನ್ನು ನೇತಾಕಿ ಬಿಡು.

ತಾಯಿ: ಯಾಕೋ ಹಂಗಂತೀಯಾ?

ಮಗ: ನಿನ್ನೆ ಅಪ್ಪ, ಕೆಲಸಗಾರ್ತಿಯನ್ನು ನೋಡಿ 'ಈ ಸೀರೆಯಲ್ಲಿ ನೀನು ಮಹಾಲಕ್ಷ್ಮಿಯಂತೆ ಕಾಣುತ್ತೀಯ' ಅಂತ ಹೊಗಳುತ್ತಿದ್ದರು.

★★★

### ಜಾಹೀರಾತು

ಸತೀಶ್: ಯಾಕೋ, HOD ನಿನ್ನನ್ನು ಸಿಕ್ಕಾಪಟ್ಟೆ ಬೈಯುತ್ತಿದ್ದರು?

ಶ್ರೀಧರ್: ಅವರ ಮುದ್ದಿನ ನಾಯಿ ಕಾಣೆಯಾಗಿದೆಯಂತೆ.

ಸತೀಶ್: ಅದ್ಸರಿ, ನಿನಗ್ಯಾಕೆ ಬೈದರು?

ಶ್ರೀಧರ್: ಪತ್ರಿಕೆಗಳಲ್ಲಿ ಜಾಹೀರಾತು ನೀಡೋಕೆ ಹೇಳಿದ್ದರು. 'HOD ನಾಯಿ ಕಾಣೆಯಾಗಿದೆ' ಅಂತ ಜಾಹೀರಾತು ನೀಡಿದೆ. ಅದಕ್ಕೆ ಸಿಟ್ಟು ಮಾಡಿ ಕೊಂಡರು.

★★★



### ಮರೆತೆ ಬಿಡು

ಬೆಳಿಗ್ಗೆ ಅಪ್ಪ ಗದರಿದ.

ತಂದೆ: ಮಗನೆ! ಇವತ್ತು ಏನಾದರೂ ನೀನು ಪರೀಕ್ಷೆಗೆ ಸರಿಯಾಗಿ ಬರೆಯದೆ ಹೋದರೆ ನಾನು ನಿನ್ನ ಅಪ್ಪನೆಂಬುದನ್ನೇ ಮರೆತು ಬಿಡು.

ಸಂಜೆ ಮಗ ಮನೆಗೆ ಬಂದಾಗ

ತಂದೆ: ಹೇಗೆ ಬರೆದಿದ್ದೀಯಾ ಪರೀಕ್ಷೆ?

ಮಗ: ಯಾರ‍್ರೀ.... ನೀವು..?

★★★

### ಚಂದ್ರನಂತೆ

ಪ್ರೇಯಸಿ: ನನ್ನ ಬಾಳಿನ ಚಂದ್ರನಾಗಿ ನೀ ಇದ್ದೀಯಲ್ವಾ?

ಪ್ರಿಯತಮ: ಖಂಡಿತವಾಗಿಯೂ ಡಾರ್ಲಿಂಗ್!

ಪ್ರೇಯಸಿ: ಹಾಗಾದರೆ, ದಯಮಾಡಿ ನನ್ನಿಂದ 9,955,887.6 ಕಿ. ಮೀ. ದೂರದಲ್ಲಿರು.

### ಹಳೇದು

ಡಾಕ್ಟರ್: ನೆನಪಿಟ್ಟುಕೊಳ್ಳಿ, ನಾನು ಯಾವತ್ತೂ ಹಳೆಯದನ್ನು ಮರೆಯಲ್ಲ.

ರೋಗಿ: ಹಾಗಾದರೆ, ನಿಮ್ಮ ಫೀಸನ್ನು ಹಳೇ ಐನೂರು ರೂಪಾಯಿ ನೋಟುಗಳಲ್ಲೇ ಕೊಡಬಹುದೇ ಡಾಕ್ಟ್ರೇ?

**(ಸಂಗ್ರಹ) ಡಾ.ವಿ. ಪುಗಳೇಂದಿ**

### ರಿಲ್ಯಾಕ್ಸ್!

ಮಹಿಳಾಮಣಿಗಳಿಬ್ಬರು ಫೋನ್‌ನಲ್ಲಿ ಮಾತನಾಡುತ್ತಿದ್ದರು. ಒಬ್ಬಳು ಪ್ರತಿಷ್ಠಿತ ಕಂಪೆನಿಯೊಂದರ ಸಿಇಓ ಪತ್ನಿ. ಇನ್ನೊಬ್ಬಳು ಜನಪ್ರಿಯ ಚಿತ್ರನಟಿ.

ಸಿಇಓ ಪತ್ನಿ: ಮುಂದಿನ ಭಾನುವಾರ ನನ್ನ ಪತಿಯೊಂದಿಗೆ ಸಿಂಗಪುರಕ್ಕೆ ಹೋಗುತ್ತಿದ್ದೇನೆ, ಅವರಿಗೆ ರಿಲ್ಯಾಕ್ಸ್ ಬೇಕಾಗಿದೆ. 15 ದಿನಗಳ ರಜೆ ಹಾಕಿದ್ದಾರೆ.

ಚಿತ್ರನಟಿ: ಅರೆ! ನಾವೂ ಮುಂದಿನ ವಾರ ರಿಲ್ಯಾಕ್ಸ್‌ಗಾಗಿ ವಿದೇಶಕ್ಕೆ ಹೋಗುತ್ತಿದ್ದೇವೆ. ನಾನು ಹಾಂಕಾಂಗ್‌ಗೆ, ನನ್ನ ಪತಿ ಪ್ಯಾರಿಸ್‌ಗೆ!

★★★

### ದೊಡ್ಡ ಗಿಫ್ಟ್!

ಪತ್ನಿ: ಏನೂಂದ್ರೇ, ಈ ಸಲದ ವೆಡ್ಡಿಂಗ್ ಆನಿವರ್ಸರಿಗೆ ನನಗೆ ಬ್ಲ್ಯಾಕ್ ಬೆರ‍್ರಿ ಅಥವಾ ಆ್ಯಪಲ್ ಕೊಡಿಸಲೇಬೇಕು.

ಪತಿ: ಅಯ್ಯೋ ಪೆದ್ದಿ.. ಕೇಳೋದು ಕೇಳ್ತಿಯಾ, ಹಲಸಿನ ಹಣ್ಣೋ, ಕಲ್ಲಂಗಡಿನೋ ಕೇಳೋದಲ್ವಾ?

**(ಸಂಗ್ರಹ) ಕೆ.ಆದಿತ್ಯ ಹೆಬ್ಬಾರ್**

